# ಸ್ವಾತಂತ್ರ್ಯೋತ್ಸವದ ಶುಭಾಶಯಗಳು

# Happy Independence Day

## 'ಸ್ವತಂತ್ರ ಭಾರತೀಯರು'

ಭಾರತೀಯರು ನೋಡ, ನಾವು ಭಾರತೀಯರು
ಸರ್ವತಂತ್ರ ಸ್ವತಂತ್ರ ಸುಸಂಸ್ಕೃತ ಸಂಸ್ಕಾರವಂತರು ।
ಭಾರತೀಯರು ನೋಡ, ನಾವು ಭಾರತೀಯರು
ಪ್ರಗತಿಶೀಲ, ಸೃಜನಶೀಲ, ಸಹಬಾಳ್ವೆಯ ಸಜ್ಜನರು ॥ ಪ ॥

ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ
ಎಂದರು ಅಂದು ಸ್ವಾಮಿ ವಿವೇಕಾನಂದರು ।
ರೂಪಾಯಿಗೊಂದು ಕೇಜಿ ಅಕ್ಕಿ ತಿಂದು
ಅನಾಯಾಸದಿಂದ ಮಲಗಿಹೆವು ಇಂದು ನಾವು ಭಾರತೀಯರು ॥

ಪುಕ್ಕಟೆಯಾಗಿ ಕೊಟ್ಟಿಹರು ನಿರೋಧ್ ಸರಕಾರ
ಭಾರತೀಯರು ಆಗಿಹೆವು ನಾವು ನೂರಿಪ್ಪತ್ತು ಕೋಟಿ ವಿಷಾದ ।
ಭ್ರಷ್ಟಾಚಾರ ರೋಗ ನಿರೋಧಕ ಶಕ್ತಿಯಿಲ್ಲದೆ
ಸಹಿಸುತಿಹೆವು ನಾವು ಕೆಲವೇ ಕೆಲವರಿಂದ ಅನೇಕ ಅಪರಾಧ ॥

ನಿರುದ್ಯೋಗದ ತರವರೂರಾಗಿದೆ ನಮ್ಮ ಭವ್ಯ ಭಾರತ
ಭಾರ ಅತೀ ನಾವು ಈ ಭೂಮಿಗೆ ೧೨೦ ಕೋಟಿ ಭಾರತೀಯರು ।
ಭ್ರಷ್ಟಾಚಾರದ ಬಾವಿಯಲಿ ಬಿದ್ದು ಹೊಲಸು ನಾರುತಿಹೆವು ಇಂದು ನಾವು ಭಾರತೀಯರು
ಪ್ರಜ್ಞಾವಂತರೊಬ್ಬರದೂ ಇಲ್ಲ ಇದಕೆ ವಿರೋಧ ಇದೆಂತ ಗ್ರಹಚಾರ ॥

ಕೋಟಿ ಕೋಟಿ ನೂರಿಪ್ಪತ್ತು ಕೋಟಿ, ಭಾರತೀಯರ ಕೋಟಿಗಳನು
ನುಂಗಿಹರು ಈ ಕೋಟೆಯೊಳು, ಕೆಲವೇ ಖೋಟಾ ಭಾರತೀಯರು ।
ಬಿಡಲಿಲ್ಲ, ಬಿಡಲಿಲ್ಲ ಈ ತರಲೆಗಳು ಕಣ್ಣಿಗೆ ಕಾಣದ ತರಂಗಗಳನು
ಬಿಡಲಿಲ್ಲ ಕಲ್ಲಿದ್ದಲನೂ, ಬಿಡಲೂ ಇಲ್ಲ ದನ ತಿನ್ನುವ ಹುಲ್ಲನೂ ಈ ಜನ ॥

ಹರಿದಿಹರು ಇವರು ಸೈನಿಕರ ಅಂಗಿ, ಫಿರಂಗಿಗಳನು
ಭವ್ಯ ಭರತ ಕೋಟೆಯ ಕಾಯುವ, ಸೈನಿಕನಾಗಿಹ ಸಿನಿಕನು ।
ಈ ಹಗಲು ದರೋಡೆಕೋರರು ಮುತ್ತಿಹರು ವೈದ್ಯಕೀಯ ಶಿಕ್ಷಣವ
ವೈದ್ಯ ವೃತ್ತಿಯ ಕನಸುಗಾರನಾಗಿಹನು, ಅಸಹಾಯಕನು ॥

ಜೈ ಜವಾನ್, ಜೈ ಕಿಸಾನ್
ಅಂದ ಮಂತ್ರಿ ಶಾಸ್ತ್ರಿ ಅಂದು ।
ಕೇಳುವರು 'ಹೇ ಸಬ್ ಹೈ, ಕಿಸಕೀ 'SON"
ಎಂದು ಕುತಂತ್ರ ಮಂತ್ರಿ ಇಂದು ॥

ದೇಶ ಕಾಯುವ ಸೈನಿಕರ ಸಾವಿಗೆ
ಕೊಡುವರು ಕೆಲವೇ ಕೆಲವು ಲಕ್ಷ, ಅಲಕ್ಷ ।
ಕಾಮನ್‌ವೆಲ್ತ್ 'SHOOTING' ವಿಜೇತನ
ತಲೆ ತಲೆಮಾರುಗಳೆಲ್ಲಾ ಸುರಕ್ಷಾ ॥

ಕ್ರಿಕೇಟ್ ಬಿಟ್ಟರೆ, ಬೇರೆ ಕ್ರೀಡೇನೆ ಇಲ್ಲ
ಕ್ರಿಕೇಟ್ ನಿಂದ ಕಿರಿ ಕೆಟ್ಟರೆಲ್ಲ ।
ಅದು 'IPL' ಬರೀ ಮೋಸದಾಟವಲ್ಲ
'IPPL - Indians Poor Progress Lounge' ಆಗಿದೆಯಲ್ಲಾ !!

ಬಿಡಲಿಲ್ಲವೋ ಕಾಮನ್ ವೆಲ್ತ್ ಕ್ರೀಡಾಕೂಟ
ಆಗಿತ್ತು ಅದು ಕಾಮಕೂಟ, ಧನಲಕ್ಷ್ಮಿಯ ಹಿಂದೆ ಕಾಮುಕರ ಓಟ ।
ಸೃಜನಶೀಲ ವಿಜ್ಞಾನಿ ಮನೆಯಲ್ಲಿ ಇಟ್ಟುಕೊಂಡಿಹನು ಅವನ ಶೋಧನೆಯ 'PATENT' ಉ
ಆ ಜ್ಞಾನಿಗೆ ಕೊಡಲಾಗುತ್ತಿಲ್ಲ ಅವನ ಮನೆಯ 'RENT' ಉ ॥

ಗಾಂಧಿಯ ಅನುಯಾಯಿಗಳೊಂದಿಗಿನ ಸ್ವಾತಂತ್ರ್ಯ ಸತ್ಯಾಗ್ರಹಕೆ
ಬೆಚ್ಚಿ ಬಿದ್ದು ಕಗ್ಗತ್ತಲಲ್ಲಿ ಭಾರತವ ಬಿಟ್ಟು ತೊಲಗಿದರು ಬ್ರಿಟೀಷರು ।
ಅಣ್ಣಾ ಹಜಾರೆಯೊಂದಿಗಿನ ಜನಲೋಕಪಾಲ ಮಸೂದೆಯ ಹೋರಾಟಕೆ
ಬಿಸಿಲಿನಲ್ಲಿ ಬರೆ ಬರುವಂತೆ ಬಾರಿಸಿದರು ಭ್ರಷ್ಟ ಭಾರತೀಯರು ॥

ಸ್ವತಂತ್ರ ಭರತಮಾತೆಯ ದೇಹ ವಿಭಜನೆಯ ನಂತರ
ಅಖಂಡ ಭಾರತದ ಕನಸ, ಅಂದು ಹಲವರು ಕಂಡರಂತೆ ।
ದೇಶ ವಿಭಜನೆಯ ಭಜನೆಯ ಭಜಿಸುವ
ಅತಂತ್ರ ಕುತಂತ್ರಿಗಳಿಂದ ಇಂದು ಆಗಿಹಿದು, ಇದು ಹುಚ್ಚರ ಸಂತೆ ॥

ಹಸಿವಿನಿಂದ ಬಸವಳಿವ, ಹಾಲು
ಹಲ್ಲಿನ ಕೂಸುಗಳು ಸಾವಿರ ಸಾವಿರ ।
ತಾಯಿ ದೇಹವ ಛಿದ್ರಿಸಿ, ಹಾಲ್ಕೋಹಾಲಿನ ಅಮಲಿನಲಿ
ಕಲ್ಲ ಮೇಲೆ ಸುರಿವರು, ಗೋಮಾತೆಯ ಹಾಲ ಸಾವಿರ ಲೀಟರ ॥

ಕಾಲಿಗೊಂದು ಕೈಯಿಗೊಂದು ಕಾಲೇಜುಗಳು, ವಿಶ್ವವಿದ್ಯಾಲಯಗಳು
ಕೆಲಸವಿಲ್ಲದೆ ಕಾಲಿಟ್ಟಿಹರು ಯುವಕರು, ಕೊಲೆ ಜೂಜುಗಳಿಗೆ ।
ಕಾಯಕವೇ ಕೈಲಾಸವೆಂದರು, ಕೆಲಸವಿಲ್ಲದೇ ಕೈಲಾಸಂ ಹಾದಿ ಹಿಡಿಯುತಿಹರು
ಕೈಲಾಸ ಪರ್ವತವೇರಬೇಕಾದ ಕಲಿಗಳು, ಕಳ್ಳರ ಕಾಲ್ತುಳಿತದಿಂದ ಕಾಲವಾಗಿಹರು ॥

ಭಯೋತ್ಪಾದಕರ ಭದ್ರ ಕೋಟೆಯಾಗಿದೆ ಭಾರತ ದೇಶವಿಂದು
ಭ್ರಷ್ಟರ ಬೆದರಿಕೆಯಿಂದ ಬಿಟ್ಟು ತೊಲಗಿಹರು ಪ್ರತಿಭಾವಂತರು ಭಾರತವ।
ಕರೆಯುತಿಹರು ರಾಜಕಾರಣಿಗಳು ಇದನು ಪ್ರತಿಭಾ ಪಲಾಯನವೆಂದು
ಕೊಲೆಗೈಯುತಿಹರು ಬಂಡೆದ್ದ ಬಡ ಭಾರತೀಯರ ಕರೆದು ಅವರ ಭಯೋತ್ಪಾದಕರು ॥

ಭಾಗ್ಯಲಕ್ಷ್ಮಿ ಯೋಜನಾ, ಕ್ಷೀರಭಾಗ್ಯ, ಆಶ್ರಯ ಯೋಜನಾ
ವೃದ್ಧಾಪ್ಯ ವೇತನ, ವಿಧವಾ, ನಿರುದ್ಯೋಗ ವೇತನ ।
ಧನಲಕ್ಷ್ಮಿ ಭಾರತವ ಬಿಟ್ಟು ತೊಲಗಿ, ಸಾಲಸಾಗರದಲಿ ಸ್ನಾನ
ಶ್ರೀಮಂತ ದೇಶ ಭಾರತದ ಬಡಪ್ರಜೆ ಭಿಕ್ಷೆ ಬೇಡುತಿರುವುದೇ ನಮ್ಮ ದರಿದ್ರತನ ॥

ಪ್ರಗತಿ ಪ್ರಗತಿಯೆಂದು ಪ್ರಕೃತಿ ಸೌಂದರ್ಯವ ಹಾಳುಗೆಡುವುತ
ಭೋಪಾಲ್ ಅನಿಲ ದುರಂತ, 'FLY OVER, METRO RAIL' ಅನಂತ ।
ಪಕ್ಷಿ-ಪ್ರಾಣಿ ಸಂತತಿ, ಸಸ್ಯ ಕೋಟಿಗಳ ಜೀವನದ ಅವನತಿ
ಕೈ ಮುಗಿಯುತಿಹೆವು 'ಬರದ ಮಾತೆ' ಭಾರತಿಗೆ, ಪ್ಲಾಸ್ಟಿಕ್ ತ್ರಿವರ್ಣ ಧ್ವಜವ ತುಳಿಯುತ ॥

ಮದುವೆಗೊಂದು ದೇವಮಂದಿರ, ಮಗುವಿಗಾಗಿ ವ್ರತಗಳು ಸಾವಿರ
ಆರೋಗ್ಯಕ್ಕಾಗಿ ತಾಯತಗಳಿಂದ ಭಾರ, ಮೂಢ ನಂಬಿಕೆಗಳಿಂದ ಮಗುವಿನ ಉಡದಾರ ।
ಔಷದಿಯಿಂದ ಗುಣವಾದರೂ, ಮುಗಿಯುವರು ಕೈಯ ಶ್ರೀಮಂತ ಪೂಜಾರಿಗೆ
ತಪ್ಪಿಲ್ಲದಿದ್ದರೂ ಮುರಿಯುವರು ಕೈಯ, ಇದೇ ಬಡ ವೈದ್ಯರಿಗೆ ತೋರುವ ಆದರ ॥

ಸಂಸ್ಕೃತಿ, ಸಂಸ್ಕಾರದ ವಿಶ್ವಸಾರ ಭೌಮಳಾಗಿ
ಅಂದು ಮೆರೆಯುತ್ತಿದ್ದಳು ತಾಯಿ ಭಾರತ ಮಾತೆ ।
ಜಾಗತೀಕರಣ, ಪ್ರಗತಿಯೆಂದು, ಪರಕೀಯರನನುಸರಿಸಿ
ಭಾರತೀಯರ ಸಂಸ್ಕಾರ ಸಾರವಿಲ್ಲದೇ ಪಾತಾಳಕ್ಕಿಳಿದಿರುವುದೇ ವ್ಯಥೆ. ॥

ಸಂಯಮ, ಸಂಸ್ಕಾರ ಸಂಸ್ಕೃತಿಯ ರಾಜ ಭರತ ದೇಶವಿದು
ರಾಜಧಾನಿಯಲ್ಲೇ ಸಾವಿರ ಸುಮಗಳ ಸಾಮೂಹಿಕ ಅತ್ಯಾಚಾರ, ಅಂತ್ಯ ಸಂಸ್ಕಾರ ।
ಕಾವಿಯ ದರಿಸಿದ ಕಾಮುಕರ ನಿತ್ಯ ಆನಂದದಿಂದ
ವಿವೇಕಾನಂದ ಸಾರಿದ ಸಂಸ್ಕೃತಿ ಧರ್ಮಕ್ಕಿಂದು ವಿಶ್ವದೆಲ್ಲಡೆ ಬಹಿಷ್ಕಾರ ॥

ಜಯಶೀಲ, ಪ್ರಗತಿಶೀಲ, ಸೃಜನಶೀಲ, ಬಹು ಶೀಲವಂತರು ನಾವು
ಇವು ನಮ್ಮ ನಾಡನಾಳುವ ಗರತಿ, ಒಡತಿಯರ ನುಡಿಮುತ್ತುಗಳಿವು ।
ಶೀಲವಂತ ನಾರಿ ಭಾರತಿ, ತುಂಬಲು ಹೊಟ್ಟೆಯ ಚೀಲ
ಹಿಡಿದಿಹಳು ಅಸಹಾಯಕಳಾಗಿ ವೇಶ್ಯಾವೃತ್ತಿಯ ॥

ಭವ್ಯ ಭರತರಾಜನ ಕೋಟೆಯಲಿ ಬದುಕಲು
ಬೇಕೇ ಬೇಕು ಮೀಸಲಾತಿಯ ಕೋಟಾ, ಇಲ್ಲವೇ ಕೋಟಿಗಟ್ಟಲೆ ಖೋಟಾನೋಟು ।
ಲಂಚ, ಮಂಚ, ಗೂಂಡಾಗಿರಿ ಭಂಡತನ, ಮತ್ತೆ ನಿಧಾನ
ಇದುವೇ ಬಡ ಭಾರತೀಯರ, ರಾಜಕೀಯದ ಪ್ರಧಾನ ಕಾರ್ಯ ವಿಧಾನ. ॥

ಸೃಜನಶೀಲ, ಸುಸಂಸ್ಕೃತ, ಸಂಸ್ಕಾರವಂತ ಸಜ್ಜನನಿಗೆ
ಸಿಹಿ ಉಣಿಸಲಾಗುತ್ತಿಲ್ಲ, ಆ 'ಹೊರೆ ಹೊತ್ತ ಭಾರತೀಯ ನಾರಿಗೆ' ।
ಸುವಾಸನೆಯ ಚೀರಲಾಗುತ್ತಿಲ್ಲ ಆ ಬಾಲೆ ಅಬಲೆ 'ಕಮಲ'ಳಿಗೆ
ಸಹಕರಿಸಲಾಗುತ್ತಿಲ್ಲ ನಮ್ಮ ೨೪೦ ಕೋಟಿ 'ಕೈ' ಗಳಿಗೆ ॥

ನಿದ್ರೆಯಿಂದೆದ್ದು ಭಾರತೀಯನು ನೋಡ ಹೊರಟಿಹನು
'ಆನೆ'ಯ ಮೇಲಿನ ಅಂಬಾರಿಯ ಮೆರವಣಿಗೆ ।
ಹೊರೆಹೊತ್ತ ನಾರಿಯ ಕುಡಿಯನುಳಿಸಲಾಗುತ್ತಿಲ್ಲ ಆ 'ಕುಡಿಗೋಲಿಗೆ'
ಬೆವರಿ ಬಸವಳಿದ ರೈತನ ಕೂರಿಸಲಾಗುತ್ತಿಲ್ಲ 'ಫ್ಯಾನ್' ಕೆಳಗೆ ॥

ಕಾರಣ ಕಾರು-ಬಾರಿನಿಂದ ಬರುವರು ಬೀಗರು ಕೈಯಲಿ ಬೀರು ಜೊತೆಗೆ
ಆ ಘಳಿಗೆ ಅಗಳಿಗೆ, ಮನೆಯ ಬಾಗಿಲಿಗೆ ಕೇವಲ ಮತಗಳಿಗೆ ।
ಕೆರಳಿದ್ದರು, "ಬ್ರಿಟೀಷರೇ ಭಾರತವ ಬಿಟ್ಟು ತೊಲಗಿ" ಎಂದು, ನಮ್ಮ ಹಿರಿಯರು ಅಂದು
"ಭ್ರಷ್ಟ ಭಾರತೀಯರೇ, ಬಿಟ್ಟು ತೊಲಗಿ ಭಾರತವ" ಎಂದು ಕೂಗಬೇಕಾಗಿದೆ ನವ ತರುಣರು ಇಂದು !!

ಸಮಾಜ ಸುಧಾರಣೆಗಾಗಿ ಸುಳ್ಳು ಸೇವಾ ಸಂಘಗಳು ಅಪಾರ
ಸ್ವಾರ್ಥ ಸಾಧನೆಗಾಗಿ ಮಾಡುತಿಹರು, ಹಫ್ತಾ ವಸೂಲಿ ಸಾವಿರ ಸಾವಿರ ।
ಪಾಂಚಾಲಿ ದ್ರೌಪದಿಯ ವಸ್ತ್ರಾಪಹರಣ ಮಾಡಿದ್ದು, ದುಃಶ್ಯಾಸನಾದಿ ಕೌರವರಂದು
ಮತದಾನದ ಮುನ್ನ ರೇಷ್ಮೆ ಸೀರೆಯನ್ನುಡಿಸಿ ಅಪಹರಿಸಿಹರು ಮಾನ ಗಾಂಧಿ ಕೃಷ್ಣರಿಂದು. ॥

ಮತದಾನದ ದಿನದ ರಜೆಯಂದು ನಮ್ಮ ಯುವಕರು,
ಹುಡುಗಿಯರೊಂದಿಗೆ, ಹೊರಡುವರು ಮಜ ಮಾಡಲಿಕೆ ।
ಬರಬಾರದೇ ಮತದಾನಕೆ, ಕೈ ಬಿಡದೇ
ಹುಡುಗಿಯರ, ಕರೆತನ್ನಿ ಕೈ ಜೋಡಿಸಲು ರಾಷ್ಟ್ರ ನಿರ್ಮಾಣಕೆ ॥

ಕಣ್ಣಿಗೆ ಕಂಡರೂ, ಕೇಳಿಸಿಕೊಂಡರೂ
ಮೌನವಾಗಿಹನು ಆ ಮೋಹನನು, ಮನ ಮೋಹನನು ।
ಪಾಲಿಸುತಿಹ ಅವ ಪಿತಾಮಹ
ಮಹಾತ್ಮ ಗಾಂಧಿಯ, ಮೂರು ಮಂಗಗಳ ತತ್ವವನು ॥

ಭಾರತೀ, ಭಾರತೀ ಓಮಾತೆ ನೀ ಏಕೆ
ಇಂದು ಹೀಗೆ ಈ ಭ್ರಷ್ಟರಿಗೆ ಕರುಣೆ ತೋರಿಹೆ? ।
ಓ ಮಾತೆ ಭಾರತೀ ಶಪಿಸು ಇವರಿಗೆ ಸರ್ವನಾಶವ
ಸಹಿಸದಿರು ಇವರ ಅತ್ಯಾಚಾರ ಅನಾಚಾರವ ॥

ಭಾರತೀಯರು ನೋಡ, ನಾವು ಭಾರತೀಯರು
ಸರ್ವತಂತ್ರ ಸ್ವತಂತ್ರ ಸುಸಂಸ್ಕೃತ ಸಂಸ್ಕಾರವಂತರು ।
ಭಾರತೀಯರು ನೋಡ, ನಾವು ಭಾರತೀಯರು
ಪ್ರಗತಿಶೀಲ, ಸೃಜನಶೀಲ, ಸಹಬಾಳ್ವೆಯ ಸಜ್ಜನರು ॥ ಪ ॥

**ಸಜ್ಜನ್ ಸೇವಾ ಸಂಘ**
ಸಜ್ಜನರಿಂದ ಸದೃಢ ಸೃಜನಶೀಲ ಸಹಬಾಳ್ವೆಯ ಸಮಾಜಕ್ಕಾಗಿ
ಸ್ಥಾಪನೆ : 01-07-2013

Sajjan Seva Sangha
OUR MISSION IS TO HELP THOSE WHO NEED IT
www.sajjanseva.org

ಡಾ|| ಹರೀಶ್ ಸಜ್ಜನ್
ಸಂಸ್ಥಾಪಕ ಕಾರ್ಯದರ್ಶಿ, 'ಸಜ್ಜನ್ ಸೇವಾ ಸಂಘ'
ಸರ್ವಜ್ಞನ ಮಾಸೂರು.